# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 121/2019**

| | | |
|---|---|---|
| ಸಾಕ್ಷಿದಾರರ ಹೆಸರು | : ಚಂದ್ರು | ಪಿಡಬ್ಲ್ಯೂ ಃ 6 |
| ತಂದೆಯ / ಗಂಡನ ಹೆಸರು | : ಲೇಟ್ ಶಂಕರ | ಸಿಡಬ್ಲ್ಯೂ ಃ 16 |
| ವಯಸ್ಸು | : 49 ವರ್ಷ | |
| ಉದ್ಯೋಗ | : ಅಡಿಗೆ ಕೆಲಸ | |
| ವಾಸಸ್ಥಳ | : ಕಾವೇರಿನಗರ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 18.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ನನಗೆ ಚಾಸಾ.2 ಗೊತ್ತು. ಚಾಸಾ.11, 12 ರವರ ಪರಿಚಯ ಇರುತ್ತದೆ. ಚಾಸಾ.13 ರಿಂದ 15 ರವರನ್ನು ನಾನು ನೋಡಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರನ್ನು ನಾನು ನೋಡಿರುತ್ತೇನೆ . ಅವರು ನಮ್ಮ ಏರಿಯದಲ್ಲಿ ವಾಸ ಇರುತ್ತಾರೆ.

3. ಈಗ್ಗೆ 7 ವರ್ಷಗಳ ಹಿಂದೆ ಗಣಪತಿ ಹಬ್ಬದ ದಿನ ನಾನು ಮತ್ತು ನನ್ನ ಕುಟುಂಬದವರು ಅರಮನೆಯ ಕೋಟೆ ಆಂಜನೆಯ ದೇವಸ್ತಾನಕ್ಕೆ ಹೋಗಿ ವಾಪಾಸ್

ಮನೆಗೆ ಬಂದಿರುತ್ತೇವೆ. ಮನೆಗೆ ಬಂದು ನಾನು ಬಟ್ಟೆ ಬದಲಿಸುವಾಗ , ನಮ್ಮ ಮನೆಯ ಬಳಿ ಜನ ಕೂಗಾಡಿಕೊಳ್ಳುತ್ತಿದ್ದರು. ಆಗ ಸಮಯ ಸಂಜೆ 08.00-08.30 ಆಗಿರುತ್ತದೆ.

4. ನಾನು ಕೂಗಾಡುವ ಶಬ್ದವನ್ನು ಕೇಳಿ ಹೊರಗಡೆ ಓಡಿ ಬಂದು ನೋಡಿದಾಗ , ನಾರಾಯಣ ರವರು ಕೆಳಗಡೆ ಬಿದ್ದಿರುವುದನ್ನು ಕಂಡು ಬಂದಿತ್ತು. ನಾನು ನೋಡಿದಾಗ ನಾರಾಯಣರವರಿಗೆ ಏಟಾಗಿ ರಕ್ತ ಬರುತ್ತಿದ್ದು, ಅವರಿಗೆ ಕತ್ತಿನ ಬಳಿ ಎಡಗೈ ನ ತೋಳಿನ ಭಾಗದಲ್ಲಿ ಮತ್ತು ಬೆನ್ನಿನ ಕೆಳಗಿನ ಭಾಗಕ್ಕೆ ಏಟಾಗಿರುವುದು ಕಂಡು ಬಂದಿತ್ತು. ಅಲ್ಲಿ ತುಂಬಾ ಜನ ಸೇರಿದ್ದರು. ಆಗ ನಾವು ನಾರಾಯಣ ರವರನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಪ್ರಯತ್ನಿಸಿ ಆಟೋದಲ್ಲಿ ಅವರನು ಕೂರಿಸಲು ನೋಡಿದಾಗ ಆಗಿರುವುದಿಲ್ಲ. ನಂತರ ನನ್ನ ಬಳಿ ಇದ್ದ ಒಮಿನಿ ವಾಹನದಲ್ಲಿ ಅವರನ್ನು ಕೂರಿಸಿಕೊಂಡು ಕೊಲಂಬಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸುತ್ತೇವೆ.

5. ನಾರಾಯಣ ರವರನ್ನು ಮೊದಲಿಗೆ ವಿಚಾರಿಸಿದಾಗ ಅವರು ಹೇಳುವ ಸ್ತಿತಿಯಲ್ಲಿ ಇರಲಿಲ್ಲ. ನಂತರ ಅವರನ್ನು ವಿಚಾರಿಸಿರುತ್ತೇನೆ. ಆಗ ಅವರು ಹರೀಶ, ಭರತ , ಮಹೇಂದ್ರ ಮತ್ತು ಮತ್ತೊಬ್ಬ ಮಹೇಂದ್ರ ರವರ ಹೆಸರುಗಳನ್ನು ಹೇಳಿ , ಇವರುಗಳು ಹೊಡೆದಿರುತ್ತಾರೆ ಎಂದು ಹೇಳಿರುತ್ತಾರೆ. ಪ್ರಕರಣದಲ್ಲಿ ಪೊಲೀಸರು ನನ್ನನು ವಿಚಾರಿಸಿದಾಗ ಮೇಲೆ ಹೇಳಿದ ವಿಚಾರವನ್ನು ಹೇಳಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**<u>ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

6. ಮಹೇಂದ್ರ ಮತ್ತು ಇನ್ನೊಬ್ಬ ಮಹೇಂದ್ರ ಎಂದು ಹೇಳಿರುವ ವಿಚಾರವನ್ನು ಪೊಲೀಸರಿಗೆ ಹೇಳಿರುತ್ತೇನೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ನಾನು ಮಹೇಂದ್ರ ಮತ್ತು ಇನ್ನೊಬ್ಬ ಮಹೇಂದ್ರ ಎನ್ನುವವರ ಹೆಸರನ್ನು ಹೇಳಿರುವುದಿಲ್ಲ. ಕೇವಲ ಹರೀಶ, ಗುಂಡ , ಮಂಜ , ಭರತ ರವರ ಹೆಸರು ಮಾತ್ರ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯೂ ಮುಂದುವರೆದು ನಾರಾಯಣರವರು ಆಸ್ಪತ್ರೆಯಲ್ಲಿ ಹೇಳಿರುವುದನ್ನು ನಾನು ಹೇಳಿರುತ್ತೇನೆ. ಸಾಕ್ಷಿ ಮುಂದುವೆರದು ಯಾರನ್ನೂ ನಾನು ನೋಡಿರುವುದಿಲ್ಲ. ಅವರು ಹೇಳಿರುವುದನ್ನು ನಾನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ನಾರಾಯಣ ರವರು ಮಹೇಂದ್ರ ಮತ್ತು ಇನ್ನೊಬ್ಬ ಮಹೇಂದ್ರ ಎಂದು ಯಾರ ಹೆಸರು ಹೇಳಿರುವುದಿಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

7. ನಂತರ ನಾರಾಯಣರವರು ನನ್ನ ಮುಂದೆ, ರಾತ್ರಿ 08.15 ರ ಸಮಯದಲ್ಲಿ ಹರೀಶ ಮತ್ತು ಭರತ ಇಬ್ಬರೂ ಹರೀಶನ ಆಟೋದಲ್ಲಿ ಕೀರ್ತಿ ಮಂಜ , ಹಾಗೂ ಗುಂಡ ಮೂರು ಜನರು ಕಾರಿನಲ್ಲಿ ನನ್ನ ಆಫೀಸ್ ಬಳಿ ಬಂದು ನಮ್ಮನು ಕೇಳಲು ನೀನು ಯಾವ ತೋಟದಪ್ಪ ಎಂದು ಜಗಳ ತೆಗೆದು ಹರೀಶ ಲಾಂಗ್ ನಿಂದ, ಗುಂಡ ಚಾಕುವಿನಿಂದ ಚುಚ್ಚಿ ಕೀರ್ತಿ ಭರತ ಮತ್ತು ಮಂಜು ಎಲ್ಲರೂ ಕೈಗಳಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದು ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ.24 ಎಂದು ಗುರುತಿಸಲಾಯಿತು. ನಾನು ಪೊಲಿಸೀರ

ಮುಂದೆ 5 ಜನರ ಹೆಸರು ಮಾತ್ರ ಹೇಳಿದ್ದು ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದೆನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ

8. ಆರೋಪಿತರು ನಮ್ಮ ಏರಿಯಾದಲ್ಲಿ ಇರುತ್ತಾರೆ ಎಂದು ಪರಿಚಯ ಹೇಳಿದ್ದು, ಘಟನೆಯ ಬಗ್ಗೆ ಅವರನ್ನು ನಾನು ಗುರುತಿಸಿರುವುದಿಲ್ಲ ಎಂದರೆ ಸರಿ. ನಾರಾಯಣ ರವರು ಹೆಸರುಗಳನ್ನು ಹೇಳಿರುತ್ತಾರೆ ಎಂದು ಹೇಳಿದ್ದು, ಅವರು ಹೇಳಿರುವ ಹೆಸರುಗಳನ್ನು ಮಾತ್ರ ನಾನು ಕೇಳಿಸಿಕೊಂಡಿದ್ದು, ಆದರೆ ಇದೆ ಆರೋಪಿತರು ಎಂದು ಖಚಿತಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯೂ ಅವರ ಹೆಸರು ಹೇಳಿದಾಗ ನಮ್ಮ ಏರಿಯಾದವರು ಎಂದು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

9. ನೀವು ಹೋದಾಗ ನಾರಾಯಣರವರು ಬಿದ್ದಿರುವುದನ್ನು ನೋಡಿರುತ್ತೇನೆ ಎಂದು ಹೇಳಿದ್ದು, ಅವರು ಎಲ್ಲಿ ಬಿದ್ದಿರುತ್ತಾರೆ ಎಂದರೆ ಸಾಕ್ಷಿಯೂ ಅವರು ತಮ್ಮ ಆಪೀಸ್ ನ ಮುಂದುಗಡೆ ಇರುವ ರಸ್ತೆಯ ಮೇಲೆ ಬಿದ್ದಿದರು ಎಂದು ನುಡಿಯುತ್ತಾರೆ. ನಾನು , ಆರೋಪಿತರು, ನಾರಾಯಣರವರು ಒಂದೇ ಏರಿಯಾದಲ್ಲಿ ಇದುದರಿಂದ, ಆರೋಪಿತರು ಮತ್ತು ನಾರಾಯಣರವರು ಒಬ್ಬರಿಗೊಬ್ಬರು ಚೆನ್ನಾಗಿದ್ದರು ಎಂಬ ವಿಚಾರ ತಿಳಿದಿರುತ್ತದೆ ಎಂದರೆ ಸರಿ. ನಾರಾಯಣರವರ ಮೇಲೆ ಹಲ್ಲೆಯಾಗುವ ರೀತಿಯಲ್ಲಿ ಇಬ್ಬರ ನಡುವೆ ಯಾವುದೇ ದ್ವೇಷ ಇದ್ದ ಬಗ್ಗೆ ಕಂಡುಬಂದಿರುವುದಿಲ್ಲ ಎಂದರೆ ಸರಿ.

10. ಆರೋಪಿತರು ಗಣೇಶನನ್ನು ಕೂಡಿಸಿದಾಗ ನಾರಾಯಣರವರೇ ಮುಖ್ಯ ಅತಿಥಿಯಾಗಿ ಬಂದು ಪೂಜೆಗೂ ಸಹ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ. ಘಟನೆ ನಡೆಯಿತು ಎಂದು ಹೇಳಲಾದ 2 ದಿನಗಳ ನಂತರ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಪೊಲೀಸರು ಹೇಳಿಕೆಯಲ್ಲಿ ಏನು ಬರೆದುಕೊಂಡರು ಎಂದು ತಿಳಿರುತ್ತದೆಯೇ ಎಂದರೆ ಸಾಕ್ಷಿಯೂ ನಾನು ಹೇಳಿದ್ದನು ಬರೆದುಕೊಂಡಿರುತ್ತಾರೆ ಎಂದು ಅಂದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿದ್ದನ್ನು ಬರೆದುಕೊಂಡರೊ ಇಲ್ಲವೂ ಎಂದು ನನಗೆ ಖಚಿತವಾಗಿ ಹೇಳಲು ಬರುವುದಿಲ್ಲ. ಘಟನೆ ನಡೆಯಿತು ಎಂದು ಹೇಳುವ ದಿನ ನಾರಾಣಯಣರವರು ಇದೇ ಹುಡುಗರು ಎಂದು ಖಚಿತವಾಗಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯೂ ಆ ದಿನ ಅವರಿಗೆ ಜ್ಞಾನ ಇರಲಿಲ್ಲ ಎಂದು ನುಡಿಯುತ್ತಾರೆ.

**<u>ಮರು ವಿಚಾರಣೆ ಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**